# ಮಲೆನಾಡಿನ ಬೆಡಗಿ ಅಗ್ನಿಶಿಖೆ!

ಈ ಹೂವು ಉರಿವ ಬೆಂಕಿಯ ನಾಲಗೆಯನ್ನು ಹೋಲುವುದರಿಂದ ಸಂಸ್ಕೃತದಲ್ಲಿ ಇದಕ್ಕೆ ಅಗ್ನಿ ಜಿಹ್ವೆ, ಅಗ್ನಿಶಿಖೆ ಎಂದೆಲ್ಲ ಕರೆಯುತ್ತಾರೆ. ಕನ್ನಡದಲ್ಲಿ ಗೌರಿ ಹೂ, ಶಿವಶಕ್ತಿ ಹೂ ಎಂಬ ಹೆಸರಿವೆ. ಇದಕ್ಕೂ ಕಾರಣವಿದೆ. ಗೌರಿ–ಗಣೇಶ ಹಬ್ಬದ ದಿನಗಳಲ್ಲಿ ಈ ಹೂವು ಕಾಣಿಸಿಕೊಳ್ಳುವುದರಿಂದ ಇದಕ್ಕೆ ಗೌರಿ ಹೂ ಎಂದೂ, ಸಸ್ಯಶಾಸ್ತ್ರದ ಕಾಲ್ಚಿಕೇಸಿ ಕುಟುಂಬಕ್ಕೆ ಸೇರಿದ ಗ್ಲೋರಿಯೋಸಾ ಸುಪರ್ಬ ಎಂಬ ಆಕರ್ಷಕ ಬಳ್ಳಿಯಿದು. ಗ್ಲೋರಿಯೋಸ್ ಎಂದರೆ ಬೆಡಗು ಎಂದೂ ಸುಪರ್ಬ ಎಂದರೆ ಉತ್ಕೃಷ್ಟ ಎಂದೂ ಅರ್ಥವಿದೆ.

ಸಾಮಾನ್ಯವಾಗಿ ಹೂಗಳ ದಳಗಳು ದಟ್ಟ ಕೆಂಪು ಬಣ್ಣದಿಂದಿದ್ದೂ, ಬುಡದಲ್ಲಿ ಹಳದಿ ಬಣ್ಣವಿರುತ್ತದೆ. ಇದರ ಪರಾಗ ದಂಡಗಳು ಹಾಗೂ ಶಲಾಕೆ, ದಳಗಳ ಬುಡದಿಂದ ತೊಟ್ಟಿನೊಂದಿಗೆ ಹೊರ ಚಾಚಿ ಗಡಿಯಾರದ ಮುಳ್ಳಿನಂತೆ ಮಿನುಗುತ್ತವೆ. ಹೂಗಳು ಏಳು ದಿನಗಳ ತನಕ ಬಾಡದೆ ನಳ ನಳಿಸುತ್ತವೆ.

–ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು



# ವನ್ಯಧಾಮವಲ್ಲ ಮನೆ



ಸಾಮಾನ್ಯವಾಗಿ ಮೃಗಾಲಯದ ಪ್ರವೇಶದ್ವಾರದಲ್ಲಿ ಪ್ರಾಣಿಗಳ ಕಲಾಕೃತಿ ನಿರ್ಮಿಸಿ ಪ್ರವಾಸಿಗರನ್ನು ಸ್ವಾಗತಿಸುವ ಕಲೆ ಕಂಡಿದ್ದೇವೆ. ದಾವಣಗೆರೆಯ ಒಂದು ಮನೆಯ ಕಾಂಪೌಂಡ್ ಹೊರಗೆ ಆಕಾಶದೆತ್ತರಕ್ಕೆ ಕತ್ತು ಚಾಚಿ... ಬಾಯಲ್ಲಿ ಹಸಿರು ಎಲೆಯ ಕೊಂಬೆ ಹಿಡಿದ ಜಿರಾಫೆ ನೋಡಿ ಆಶ್ಚರ್ಯವಾಗುವುದು ಸಹಜ. ಹೌದು, ನನಗೂ ಮೊದಲಿಗೆ ಹಾಗೆಯೇ ಅನಿಸಿತು.

ಎಲ್ಲರೂ ತಮ್ಮ ಕನಸಿನ ಮನೆಯನ್ನು ತಮ್ಮ ಇಷ್ಟದ ವಿನ್ಯಾಸದಲ್ಲಿ ಕಟ್ಟುವ ಆಸೆ. ಅದು ಅನನ್ಯತೆಯಿಂದಿರಬೇಕು... ಎಂಬ ಪರಿಕಲ್ಪನೆ ಇಟ್ಟುಕೊಂಡು ಡಿಪ್ಲೊಮಾ ಇನ್ ಆರ್ಟ್ಸ್ ಓದಿದ ಎಮ್.ಬಿ. ಶಿವಕುಮಾರ್ ಹನ್ನೆರಡು ವರ್ಷಗಳ ಹಿಂದೆ ಪ್ರಸಿದ್ಧ ಕಲಾವಿದರಾದ ನಾ. ರೇವಣಸಿದ್ದಪ್ಪ ಅವರಿಂದ ನಿರ್ಮಿಸಿದ ಈ ವರ್ಣಮಯ ಕಲಾಕೃತಿ ಜೀವಂತ ಜಿರಾಫೆಯಂತೆ ನೋಡುಗರ ಮನದಲ್ಲಿ ಅಚ್ಚುಳಿಯುವಂತಿದೆ. ಕಾಂಪೌಂಡಿನಲ್ಲಿ ಪುಟ್ಟ ಉದ್ಯಾನವನ. ಕಾಂಪೌಂಡಿನ ಒಳಭಾಗದಲ್ಲಿ ಉಬ್ಬು ಕಲಾಕೃತಿಗಳಿಂದ ಕಂಗೊಳಿಸುವ ಅಚ್ಚುಕಟ್ಟಾಗಿರುವ ಮನೆ ಹೆಸರು 'ಈಶ್ವರಿ'.

–ಅನುರಾಧ ಟಿ. ದಾವಣಗೆರೆ

# ಕಲಾಂಚೊ ಸಸ್ಯ

ಈ ಚಿತ್ರದಲ್ಲಿ ವರ್ಣರಂಜಿತ ಹೂಗಳಿಂದ ತುಂಬಿರುವ ಪೊದೆಗಳಾಕಾರದ ಸಸ್ಯದ ಹೆಸರು ಕಲಾಂಚೊ ಎಂದು. ಆಫ್ರಿಕಾದ ಮಡಗಾಸ್ಕರ್ ದ್ವೀಪವು ಇದರ ಆವಸ ಸ್ಥಾನವಾಗಿದೆ. ಕಲಾಂಚೊ ಚೀನಿ ಪದವಾಗಿದ್ದು ಇದರರ್ಥ ಬೆಳೆಯುತ್ತದೆ ಎಂದು. ಚೀನೀಯರು ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಈ ಹೂವುಗಳನ್ನು ಬಳಸುತ್ತಾರೆ. ಈ ಸಸ್ಯದಲ್ಲಿ ಅನೇಕ ಔಷಧಿ ಗುಣಗಳಿದ್ದು ಸಂಧಿವಾತ, ಊರಿಯೂತ ಹಾಗೂ ಕ್ಯಾನ್ಸರ್ ಚಿಕಿತ್ಸೆಯಲ್ಲೂ ಬಳಸುವರು. ಕಲಾಂಚೊ ಸಂಪತ್ತು ಮತ್ತು ಸಮೃದ್ಧಿಯ ಸಂಕೇತವಾಗಿದ್ದು ನಮ್ಮ ಅಮ್ಮನ ಮನೆಯ ಹೂದೋಟದ ಸಮೃದ್ಧಿಯನ್ನು ಹೆಚ್ಚಿಸಿದೆ.

–ಸಂಜ್ಞಾ ಪಿ. ಭಟ್ಟ ಶಿರಸಿ

